THE MYSORE LEGISLATIVE ASSEMBLY.

TWELFTH DAY.

Wednesday, 2nd July 1952.

The House met in the Assembly Hall, Old Public Offices, Bangalore, at Twelve of the Clock on Wednesday the 2nd July 1952.

Mr. Speaker (Sri H. Siddaiya, B.A., LL.B.) in the Chair.

QUESTIONS AND ANSWERS.

Disposal of materials produced in Government Industrial Concerns.

Q.—148. N. C. NAGAIAH REDDY (Goribidnur).—

Will the Government be pleased to state :—

(*a*) the number of Industrial Concerns that are entirely run by them in the State ;

(*b*) the kinds of materials produced;

(*c*) how they are disposed of in the market ;

(*d*) whether there is any definite policy adopted in their disposal ;

(*e*) if they have followed Agency system on commission basis and whether they have been calling for tenders ;

(*f*) who are the agents that are entrusted with this business ;

(*g*) since how long they have been enjoying this privilege ;

(*h*) the commission allowed in each case ?

A.—Sri T. SIDDALINGAIYA (Minister for Industries).—

(*a*) Ten.

(*b*) to (*h*) The question is of excessive length and the compilation of detailed information covering such a long period would involve considerable labour and time.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—(ಎ) ಪ್ರಶ್ನೆಗೆ ಉತ್ತರವಾಗಿ ಹತ್ತು ಕೈಗಾರಿಕೋದ್ಯಮಗಳೆಂದು ಹೇಳಿದ್ದೀರಿ, ಅವು ಯಾವಯಾವವು ಸ್ವಾಮಿ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆ ಹತ್ತು ಕೈಗಾರಿಕೋದ್ಯಮಗಳು ಯಾವವೆಂದರೆ—

1. ಸರ್ಕಾರಿ ಸೋಪು ಕಾರ್ಖಾನೆ.
2. ,, ಎಲೆಕ್ಟ್ರಿಕ್ ಫ್ಯಾಕ್ಟರಿ.
3. ,, ಪೋರ್ಸಿಲೇನ್ ಫ್ಯಾಕ್ಟರಿ
4. ,, ಗಂಧದೆಣ್ಣೆಯ ಕಾರ್ಖಾನೆ
5. ,, ಡೈಕ್ರೋಮೇಟ್ ಫ್ಯಾಕ್ಟರಿ.
6. ,, ಸಿಲ್ಕ್ ವೀವಿಂಗ್ ಫ್ಯಾಕ್ಟರಿ, ಚನ್ನಪಟ್ಟಣ.
7. ,, ಭದ್ರಾವತಿ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆ.
8. ,, ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪು.
9. ,, ಮೈಸೂರು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ.
10. ,, ಫಿಲೇಚರ್ ಸಿಲ್ಕ್ ಫ್ಯಾಕ್ಟರಿ, ಕಾನಕಾನಹಳ್ಳಿ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಈ ಸೋಪ್ ಫ್ಯಾಕ್ಟರಿಯಲ್ಲಿ ತಯಾರಾದ ಮಾಲನ್ನು ತಾವು ಮಾರಾಟ ಮಾಡಲು ಯಾವ ಪದ್ಧತಿಯನ್ನು ಅನುಸರಿಸಲಾಗುತ್ತಿದೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದಕ್ಕೆ ಗೊತ್ತಾದ ಏಜನ್ಸಿಗಳನ್ನು ಮೊದಲಿಂದಲೂ ಮಾಡಲಾಗಿದೆ. ಅವರ ಮೂಲಕ ಆ ವ್ಯಾಪಾರಗಳು ಮಾರಾಟವಾಗುತ್ತಿವೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಅವರಿಗೆ ತಾವೇನು ಕಮಿಷನ್ನನ್ನು ಅಲೋ ಮಾಡಿದ್ದೀರಿ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—5½ ಪರ್ಸೆಂಟ್ ಕಮಿಷನ್ ಮತ್ತು 2½ ಪರ್ಸೆಂಟ್ ಡಿಸ್ಕೌಂಟ್ ಅಲೋ ಮಾಡಿದ್ದೇವೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಹಾಗೆ ಅಲೋ ಮಾಡತಕ್ಕ ಸಂದರ್ಭದಲ್ಲಿ ತಾವೇನಾದರೂ ಟೆಂಡರ್ಸ್ ಕಾಲ್‌ಫಾರ್ ಮಾಡುತ್ತೀರೋ ಅಥವಾ ಹಾಗೆಯೇ ಕೊಟ್ಟುಬಿಡುತ್ತೀರೋ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆ ಬಗ್ಗೆ ಇತ್ತೀಚೆಗೆ ಸರ್ಕಾರದವರು ಕೆಲವು ನಿರ್ದಿಷ್ಟವಾದ ರೂಲ್ಸನ್ನು ಮಾಡಿ ನಿರ್ಧರಿಸಿದ್ದಾರೆ. ಅದಕ್ಕನುಸಾರವಾಗಿ ನಾವು ಈಗ ಒ[illegible] ಅಡ್ವರ್‌ಟೈಜ್‌ಮೆಂಟ್ ಮಾಡುತ್ತಿದ್ದೇವೆ. ಟೆಂಡರ್ಸ್ ಕಾಲ್‌ಫಾರ್ ಮಾಡುತ್ತಿಲ್ಲ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಆ ಬಗ್ಗೆ ರೂಲ್ಸುಮಾಡಿ ಅದನ್ನೆಲ್ಲಾ Fix-up ಮಾಡಲಾಗಿದೆ ಎಂದು ತಿಳಿಸಿದಿರಿ. ಆ ರೂಲ್ಸುಗಳೇನೆಂಬುದನ್ನು ತಿಳಿಸುವಿರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆ ಸಂಬಂಧವಾಗಿ ಒಂದು ಗೌರ್ನಮೆಂಟ್ ನೋಟಿಫಿಕೇಷನ್ನೇ ಹೊರಡಿಸಲಾಗಿದೆ. ಅದು ಪಬ್ಲಿಕ್ ಡ್ಯಾಕುಮೆಂಟ್. It is not a private document. Every body is entitled to know that.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಹಾಗೆ ಟೆಂಡರ್ಸ್ ಕಾಲ್‌ಫಾರ್ ಮಾಡುವುದರಲ್ಲಿ ಏನಾದರೂ ಆತಂಕವುಂಟೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇಲ್ಲ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಆಸೆಟೆಕ್ ಆಸಿಡ್ಡನ್ನು ಈಗ ಎಲ್ಲಿ ತಯಾರಿಸಲಾಗುತ್ತಿದೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ತಯಾರಿಸಲಾಗುತ್ತಿದೆ. ಅಂದರೆ ಇನ್ನೂ ಅದು ಎಕ್ಸ್‌ಪರಿಮೆಂಟಿರ್ ಸ್ಟೇಜಿನಲ್ಲಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಮಾಲೂರು).—ನಮ್ಮ ದೇಶದಲ್ಲಿ ತಯಾರಾದ ಮಾಲುಗಳನ್ನು ಪರದೇಶದಲ್ಲಿ ಬಿಕರಿ ಮಾಡಲು ತಾವು ಏಜೆಂಟರುಗಳನ್ನೇನಾದರೂ ನೇಮಕ ಮಾಡಿದ್ದೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಫಾರಿಕ್ ಏಜೆಂಟ್ಸ್ ಬುಷ್ ಎಂಡ್ ಕೋ, ಯು. ಎಸ್. ಎ. ಮತ್ತು ಡೊಮಿನಿಯನ್ ಆಫ್ ಕೆನಡಾ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಹಾಗೆ ಅಲ್ಲಿ ಈಗ ಈ ಬುಷ್ ಎಂಡ್ ಕೋ, ಅವರಿಂದ ನಮ್ಮ ಮಾಲುಗಳಿಗೆ ಸಾಕಾದಷ್ಟು ಪ್ರಚಾರ ನಡೆಸಲ್ಪಡುತ್ತಿದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸರಿಯಾಗಿ ನಡೆಸಲ್ಪಡುತ್ತಿದೆಯೆಂದು ನಮ್ಮ ಅನುಭವಕ್ಕೆ ಬಂದಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಲಂಡನ್ನಿನಲ್ಲಿರತಕ್ಕ ಟ್ರೇಡ್ ಏಜಂಟರನ್ನು ಈಗ ವಜಾ ಮಾಡಬೇಕೆಂದು ಹೇಳಿರುವುದರಿಂದ, ಅಲ್ಲಿ ಮಾರಾಟವಾಗತಕ್ಕ ನಮ್ಮ ವಸ್ತುಗಳಿಗೆ ಸಾಕಷ್ಟು ನಷ್ಟ ಬಾರದೆ ನಷ್ಟವೇನಾದರೂ ಆಗಿರುತ್ತದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದಕ್ಕೆ ಕಾರಣ ಇಷ್ಟೆ; ಇದುವರೆಗೂ ನಮ್ಮ ಮೈಸೂರು ಸರ್ಕಾರದವರು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ನಮ್ಮ ದೇಶದ ಮಾಲುಗಳ ಬಿಕರಿ ಮತ್ತು ಪ್ರಚಾರದ ಬಗ್ಗೆ, ಒಬ್ಬ ಟ್ರೇಡ್ ಕಮಿಷನರನ್ನು ಮತ್ತು ಏಜಂಟರನ್ನು ನೇಮಕ ಮಾಡುತ್ತಿದ್ದರು. ಈಗ ಅದು ಬದಲಾವಣೆಯಾಗಿದೆ. The High Commissioner for India in London will look after that. ಆದರೆ ಈಗ ಅದೂ ಕೊಡಬೇಕೇ ಅಥವಾ ಬೇಡವೇ, ಅಥವಾ ನಮ್ಮವರೇ ಇರಬೇಕೇ ಎಂಬ ಇತ್ಯಾದಿ ಅನೇಕ ವಿಚಾರಗಳು ಇನ್ನೂ ಸರ್ಕಾರದವರ ಪರ್ಯಾಲೋಚನೆಯಲ್ಲಿವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ನಮ್ಮ ದೇಶಕ್ಕೆ ಹೆಚ್ಚಿನ ಸಂಪಾದನೆಯಾಗಬೇಕಾದರೆ ಅಲ್ಲಿ ನಮ್ಮ ಏಜಂಟರುಗಳಿದ್ದರೆ ಉತ್ತಮವಾಗುತ್ತಿತ್ತು ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆ ವಿಚಾರಗಳನ್ನೆಲ್ಲಾ ಇನ್ನೂ ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು. ಅಲ್ಲಿ ನಮ್ಮ ಏಜಂಟರು ಇದ್ದಾಗ ನಮಗೆ ಲಾಭ ಬರುತ್ತಿತ್ತಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನಷ್ಟವೇನೂ ಆದಂತೆ ಕಾಣುವುದಿಲ್ಲ. ಆದರೆ ಮುಂದಿನ ಆಲೋಚನೆಗೆ ತಮ್ಮ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—'ಲಾಭ ಬರುತ್ತಿತ್ತಲ್ಲವೇ' ಎಂಬುದು ನನ್ನ ಪ್ರಶ್ನೆ.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬರುತ್ತಿತ್ತೆಂದೇ ನಾನು ತಿಳಿದಿದ್ದೇನೆ.

ಶ್ರೀ ಪಿ. ಆರ್. ರಾಮಯ್ಯನವರು (ಬನವನಗುಡಿ).—ಈಗ ತಾವು ತಿಳಿಸಲಾದ The High Commissioner for India in London ಇವರಿಗೆ ಮೈಸೂರು ಸರ್ಕಾರ ಏನಾದೂ ದ್ರವ್ಯರೂಪವಾಗಿ ಸಹಾಯ ನೀಡುತ್ತಿದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇಲ್ಲ. ಅದರ ವಿಶಿಷ್ಟ ಖರ್ಚನ್ನೆಲ್ಲಾ ಇಂಡಿಯಾ ಸರ್ಕಾರದವರೇ ವಹಿಸಿಕೊಂಡಿದ್ದಾರೆ. ಅವರು ಈ ಸಂಸ್ಥಾನಗಳೆಲ್ಲವುಗಳ ಪರವಾಗಿ ಅಲ್ಲ ಕೆಲಸ ಮಾಡಬೇಕೆಂದು ಅವರಿಗೆ ಇಂಡಿಯಾ ಸರ್ಕಾರ ಸೂಚನೆ ಕೊಟ್ಟಿರುತ್ತದೆ.

Sri S. SRINIVASA IYENGAR (T. Narsipur).—What is the total amount of money invested on these concerns?

ಶ್ರೀ ಟಿ ಸಿದ್ದಲಿಂಗಯ್ಯನವರು.—ನಮಾರು ಅರೂ ಪರೆ ಕೋಟಿಯೆಂದು ಲೆಕ್ಕಹಾಕಿದೆ.

Sri S. SRINIVASA IYENGAR.—What is the percentage of profit derived by Government on this investment?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ಈಗಾಗಲೇ ಹೇಳುವುದಕ್ಕೆ ಸಾಧ್ಯವಿಲ್ಲ. ನೋಟೀಸ್ ಬೇಕು.

Sri S. SRINIVASA IYENGAR.—Is the amount entirely financed from general revenues or raised by loans?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಎಲ್ಲವನ್ನೂ ಜನರಲ್ ರೆವಿನ್ಯೂನಿಂದಲೇ ಮಾಡಲಾಗಿದೆ. ಇದು ನಮ್ಮ ಸರ್ಕಾರದ ಸ್ವಂತ ಹಣದಿಂದ ಮಾಡಿದ್ದಾಗಿದೆ.

ಶ್ರೀ ಜಿ. ಪಾಪಣ್ಣನವರು (ಶಿಡ್ಲಘಟ್ಟ—ಚಿಕ್ಕಬಳ್ಳಾಪುರ).—ಗೌರ್ನಮೆಂಟಿನವರು ನೇಮಕಮಾಡಿರತಕ್ಕ ಏಜಂಟ್ಸ್‌ಗಳಿಗೆ ತಾವು ಸಂಭಾವನೆಯನ್ನು ಯಾವ ಪರ್ಸೆಂಟೇಜಿನಲ್ಲಿ ಕೊಡುತ್ತಿದ್ದೀರಿ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ತಾವು ಕೇಳುತ್ತಿರುವುದು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ ವಿಚಾರವಾಗಿ ತಾನೆ?

ಶ್ರೀ ಜಿ. ಪಾಪಣ್ಣನವರು.—ಹೌದು.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಗ ತಯಾರಾಗುವ ಮಾಲಿನ ಮೇಲೆ 5% ಮತ್ತು ಹಳೇ ದಾಸ್ತಾನಿದ್ದ ಮಾಲಿನಮೇಲೆ 25% ಕೊಡುತ್ತಿದ್ದಾರೆ.

ಶ್ರೀ ಜಿ. ಪಾಪಣ್ಣನವರು.—ಈ ವ್ಯತ್ಯಾಸಕ್ಕೆ ಕಾರಣವೇನು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದಕ್ಕೆ ಕಾರಣ ವಿಷ್ಟೆ: ಇಲ್ಲಿಗೆ 2 ವರ್ಷಗಳ ಹಿಂದೆ ಪ್ಯಾರಾಚ್ಯುಟ್ ಇತ್ಯಾದಿಗಳಿಗೆ ಹೆಚ್ಚು ಡಿಮ್ಯಾಂಡ್ ಇದ್ದುದಂದ ಜಾಸ್ತಿಯಾಗಿ ಮಾಲನ್ನು ಉತ್ಪತ್ತಿ ಮಾಡಲಾಯಿತು. ಆದರೆ ಇತ್ತೀಚೆಗೆ ಅದಕ್ಕೆ ಸಾಕಷ್ಟು ಗಿರಾಕಿಗಳಿಲ್ಲವಾದ್ದರಿಂದ ಅದರ ಧಾರಣೆ ಬಿದ್ದುಹೋಗಿದೆ. ಅದಕ್ಕಾಗಿ ಅದನ್ನು ಖರ್ಚುಮಾಡಲು ಉತ್ತೇಜನ ಬೇಕಾಗಿದೆ ಯಾದ್ದರಿಂದ ಹೆಚ್ಚು ಕಮಿಷನ್ ಆಫರ್ ಮಾಡಲಾಗಿದೆ.

ಶ್ರೀ ಜಿ. ಪಾಪಣ್ಣನವರು.—ಈಗಿನ ಮಾರ್ಕೆಟ್ ವ್ಯಾಲ್ಯೂಗೆ ಸರಿಯಾಗಿ ಕೊಡುತ್ತಿದ್ದಿರೋ ಅಥವಾ

ಅದರ cost of production ಪ್ರಕಾರ ಕೊಡುತ್ತಿದ್ದೀರೋ ?

ಶ್ರೀ ಟಿ. ಸಿದ್ದಲಿಂಗಯ್ಯನವರು.— Old rate ಮೇಲೆ 25% ಕೊಡಲಾಗಿದೆ.

Introduction of Uniform Sets of Weights and Measures.

Q.—169. **Sri K. V. BYRE GOWDA** (Bangalore North).—

Will the Government be pleased to state :—

(*a*) whether they are aware of the variety of weights and measures that are being used in the State ;

(*b*) whether they intend to put an end of these irregular weights and measures by issuing an uniform set of weights and measures ?

A.—**Sri T. SIDDALINGAIYA** (Minister for Industries).—

(*a*) Yes.

(*b*) Proposals for necessary legislative measures in this connection are being worked up in the department concerned.

ಶ್ರೀ ಕೆ. ವಿ. ಬೈರೇಗೌಡರು.—ನನ್ನ (ಬ) ಪ್ರಶ್ನೆಗೆ ಉತ್ತರವಾಗಿ "ನಿಯಮಗಳನ್ನು ಸಿದ್ಧಪಡಿಸುವ ಕೆಲಸ" ನಡೆಯುತ್ತಿದೆ ಎಂದು ಹೇಳಿದ್ದೀರಿ, ಅದು ಯಾವಾಗಿನಿಂದ ಪ್ರಾರಂಭವಾಗಿದೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈ ವಿಚಾರಗಳೆಲ್ಲ ಸರ್ಕಾರದವರ ಗಮನಕ್ಕೆ ಬಂದಿವೆ. ಈ ಸಂಬಂಧವಾಗಿ ಚೀಫ್ ಮಾರ್ಕೆಟಿಂಗ್ ಆಫೀಸರಿಂದ ಒಂದು ವರದಿ ಸಹ ಬಂದಿದೆ. ಅದನ್ನೆಲ್ಲಾ ಸಂಬಂಧಪಟ್ಟ ಇಲಾಖೆಯವರು ಆಲೋಚನೆ ಮಾಡುತ್ತಿದ್ದಾರೆ.

ಶ್ರೀ ಕೆ. ವಿ ಬೈರೇಗೌಡರು.—ಈಗ ತಾತ್ಕಾಲಿಕವಾಗಿಯಾದರೂ ಏನಾದರೂ ಕಾರ್ಯಕ್ರಮ ಕೈಕೊಂಡು ಈ ತೊಂದರೆಯನ್ನು ತಪ್ಪಿಸುತ್ತೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ತಾತ್ಕಾಲಿಕವಾಗಿ ಏನು ಮಾಡಲು ಸಾಧ್ಯ? ಲೆಜಿಸ್ಲೇಷನ್ ಇಲ್ಲದೆ ಜಾರಿಗೆ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಒಂದೇ ಸಲ ಅಖ್ಯೆರಾಗಿ ಲೆಜಿಸ್ಲೇಷನ್ ಮಾಡಬೇಕೆಂಬುದು ಆಲೋಚನೆಯಲ್ಲಿದೆ.

ಶ್ರೀ ಕೆ. ವಿ. ಬೈರೇಗೌಡರು.—ಇದರಿಂದ ರೈತರಿಗೆ ಬಹಳಮಟ್ಟಿಗೆ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ತಾವು ಹೇಳುವ ಕಾರಣ ನಮ್ಮ ಮನಸ್ಸಿಗೂ ಬಂದು ಬದಲಾವಣೆ ಮಾಡಬೇಕೆಂದು ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ.

ಶ್ರೀ ಕೆ. ವಿ. ಬೈರೇಗೌಡರು.— ಖಚಿತವಾಗಿ ಯಾವಾಗ ಸರಿಪಡಿಸಲಾಗುತ್ತದೆ ?

(ಉತ್ತರವಿಲ್ಲ.)

Villages in Bangalore District supplied with electricity for lighting.

Q.—181. **Sri A. V. NARASIMHA REDDY** (Bangalore South).—

Will the Government be pleased to state :—

the number of villages supplied with electricity for lighting in Bangalore District from 1947 to 1952 March (details of each taluk may kindly be furnished) ?

A.—**Sri T. SIDDALINGAIYA** (Minister for Industries).—

79.

1.	Bangalore South	...	24
2.	Do North	...	21
3.	Devanahalli	...	18
4.	Dodballapur	...	6
5.	Anekal	...	4
6.	Ramanagaram	...	2
7.	Magadi	...	2
8.	Kanakapura	..	2
	Total		79

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ 1947ರಿಂದ 1952ರ ವರೆಗೆ 24 ಗ್ರಾಮಗಳಿಗೆ ವಿದ್ಯುಜ್ಜಕ್ತಿ ಒದಗಿಸಲಾಗಿದೆಯೆಂದು ಹೇಳಿದೆ. ಆ ಗ್ರಾಮಗಳು ಯಾವುವು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ತಿಳಿಸಲು ಬಹಳ ಹೆಚ್ಚಾಗಿದೆ. The list will be placed on the table.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಇನ್ನೂ ಎಷ್ಟು ಗ್ರಾಮಗಳಿಗೆ ವಿದ್ಯುಜ್ಜಕ್ತಿ ಕೊಡಬೇಕೆಂದು ಅಂದಾಜು ಮಾಡುತ್ತಿದೆ !

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ಹೇಳುವುದಕ್ಕಾಗುವುದಿಲ್ಲ. ಡಿಮ್ಯಾಂಡ್ ಮೇಲೆ ಅದನ್ನು ಯೋಚನೆಮಾಡಲಾಗುತ್ತದೆ.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಈಗ ಅಂದಾಜಾಗಿರುವುದು ಯಾವ ಗ್ರಾಮಗಳಿಗೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದಕ್ಕೆ ನೋಟೀಸ್ ಬೇಕು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು (ಹುಲಿಯೂರುದುರ್ಗ).—ರಾಮನಗರ, ಕನಕಪುರ ಮತ್ತು ಮಾಗಡಿ, ಈ ಮೂರು ತಾಲ್ಲೂಕುಗಳಲ್ಲಿ ಕಡಮೆಯಿರುವುದನ್ನು ಸರಿಪಡಿಸುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಯಾವತ್ತೂ ಹುಡುಕಿಕೊಂಡು ಹೋಗಿ ಸರಿಪಡಿಸುತ್ತೇವೆ ಎಂದು ಸರ್ಕಾರವು ಪ್ರಯತ್ನ ಮಾಡುವುದಿಲ್ಲ. ಈಗಿರುವ ಡಿಮ್ಯಾಂಡನ್ನು ಮೀಟ್ ಮಾಡಿದರೆ ಸಾಕು. ಆದ್ದರಿಂದ ಈಗ ಏನೂ ವಾಗ್ದಾನ ಮಾಡುವುದಕ್ಕೆ ಸಾಧ್ಯವಿಲ್ಲ.